ಸಾಕ್ಷಿಯನ್ನು ದಿಃ 21-10-2024 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃಶ್ರೀ.ಎಮ್ ಎ.ಪಿ.ವಕೀಲರಿಂದ(ಪ್ರತಿವಾದಿ ನಂ.1 ರಿಂದ 5 ರ ಪರವಾಗಿ)**

ವಾದಿ ಜವಾಹರ ನನ್ನ ಅಣ್ಣ. ಪ್ರತಿವಾದಿ ನಂ.1 ರಿಂದ 5 ಇವರು ಪ್ರತಿವಾದಿ ನಂ.6 ರ ಪರವಾಗಿ ಮಾಡಿದ ಖರೀದಿ ಪತ್ರವನ್ನು ಪಶ್ನಿಸಲು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ವಾದಿ ಜವಾಹರ ಏನು ಶಿಕ್ಷಣ ಪಡೆದಿದ್ದರು ಗೊತ್ತಿಲ್ಲ. ಆದರೆ, ಆತ ಶಾಲೆ ಕಲಿತಿದ್ದ. ವಾದಿಗೆ ಓದಲು ಬರೆಯಲು ಬರುತ್ತಿತ್ತು ಎಂದರೆ ಸರಿ. ವಾದಿ ಹುಬ್ಬಳ್ಳಿಯ ಬೆಳಗಾವ ಗಲ್ಲಿಯಲ್ಲಿ ಬಾಂಡೆ ಅಂಗಡಿ ನಡೆಸುತ್ತಿದ್ದ. ಸದರಿ ಅಂಗಡಿ ನಮ್ಮ ತಂದೆಯ ಕಾಲದಿಂದಲೂ ಇತ್ತು ಎಂದು ಹೇಳುತ್ತಾರೆ. ಬಾಂಡೆ ಅಂಗಡಿ ಹೊರತಾಗಿ ಮನೆ ಬಾಡಿಗೆ ಬರುತ್ತಿತ್ತು ಎಂದರೆ ಸರಿ. ವಾದಿ ಜವಾಹರ ಎಲ್ಲ ವ್ಯವಾಹಾರವನ್ನು ತಾನೇ ಮಾಡುತ್ತಿದ್ದ ಎಂದರೆ ನಾವೆಲ್ಲರೂ ಕೂಡಿ ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ವಾದಿ ಸಹಿ ಮಾಡುತ್ತಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ಆತನಿಗೆ ಪಾರ್ಶ್ವವಾಯು ಆಗುವವರೆಗೆ ಸಹಿ ಮಾಡುತ್ತಿದ್ದ. ಆನಂತರ ಸಹಿ ಮಾಡುತ್ತಿರಲಿಲ್ಲ. ವಾದಿಗೆ ಪಾರ್ಶ್ವವಾಯು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮಾಡಿದ ದಾವೆಯಲ್ಲಿ ಯಾವುದೇ ಹುರುಳಿಲ್ಲ ಎಂದು ದಾವೆ ನಡೆಸುವುದನ್ನು ಬಿಟ್ಟಿದ್ದ ಎಂದರೆ ಸರಿಯಲ್ಲ. ವಾದಿಗೆ ಚಿತಾವಣೆ ಮಾಡಿ ನಾನೇ ದಾವೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಮೂಲತಃ ಕಬಾಡೆ ಮನೆತನಕ್ಕೆ ಸೇರಿತ್ತು ಎಂದರೆ ಸರಿ. ಅದು ಅವರ ಪಿತ್ರಾರ್ಜಿತ ಆಸ್ತಿ ಆಗಿತ್ತು ಎಂದರೆ ಸರಿ. ಪ್ರತಿವಾದಿ ನಂ.6 ರ ಪರವಾಗಿ ಖರೀದಿ ಪತ್ರ ಆಗುವ ಕಾಲಕ್ಕೆ ಸುಮಿತ್ರಾಬಾಯಿಯ ಹೆಸರು ಇರಲಿಲ್ಲ ಎಂದರೆ ಸರಿ. ನಾನು ಪ್ರಮೀಳಾಬಾಯಿ ಹಾಗೂ ಗಂಗೂಬಾಯಿಯ ನೇರ ವಾರಸುದಾರನಲ್ಲ ಎಂದರೆ ಸರಿಯಲ್ಲ. ವಾದಿ ಹಾಗೂ ಲಕ್ಷ್ಮಣ ಇವರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಯಾವ ಕಾಲಕ್ಕೂ ದಾವಾ ಆಸ್ತಿನ ತನ್ನ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾರಸಾನಾತೆಯಿಂದ ಪ್ರತಿವಾದಿ ನಂ.1 ರಿಂದ 5 ರವರ ಹೆಸರು ದಾಖಲಾಗಿತ್ತು ಎಂದರೆ ಅವರ ಹೆಸರು ಗಂಗೂಬಾಯಿಯ ಹಿಸ್ಸೆಗೆ ದಾಖಲಾಗಿತ್ತು ಎಂದು ಹೇಳುತ್ತಾರೆ. ಪ್ರತಿವಾದಿ ನಂ. 1 ರಿಂದ 5 ರವರ ಹೆಸರು ದಾಖಲಾದಾಗ ನಾವು ತಕರಾರು ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿ

ವಾದಿ ಮತ್ತು ನಮ್ಮ ಸ್ವಾಧೀನದಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. ಪ್ರತಿವಾದಿಯರು ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ11-05-2011 ರಂದು ಸುಮಿತ್ರಾಬಾಯಿ ಇವರು ದಾವಾ ಆಸ್ತಿಯನ್ನು ಪ್ರತಿವಾದಿ ನಂ. 1 ರಿಂದ 5 ಇವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಹಾಗಾಗಿ ಸುಮಿತ್ರಾಬಾಯಿ ದಾವಾ ಆಸ್ತಿಯಲ್ಲಿ ಉಳಿಯಲಿಲ್ಲ ಮತ್ತು ಸದರಿ ಆಸ್ತಿಗೆ ಪ್ರತಿವಾದಿ ನಂ. 1 ರಿಂದ 5 ಇವರು ಮಾಲೀಕರಾದರು ಎಂದರೆ ಸರಿಯಲ್ಲ. ಹಕ್ಕು ಬಿಟ್ಟ ಪತ್ರ ಎಂಟ್ರಿಯಾಗುವಾಗ ವಾದಿ ತಕರಾರು ಮಾಡಿಲ್ಲ ಎಂದರೆ ಗೊತ್ತಿಲ್ಲ. ಸುಮಿತ್ರಾಬಾಯಿ ತಹಶೀಲ್ದಾರ ಹಾಗೂ ಸಿಟಿ ಸರ್ವೇಯರ್ ಅಧಿಕಾರಿಗಳ ಮುಂದೆ ವರದಿ ಹಾಗೂ ಕಬೂಲಿ ಕೊಟ್ಟ ಪ್ರಕಾರ ಪ್ರತಿವಾದಿ ನಂ.1 ರಿಂದ 5 ರ ಹೆಸರು ದಾಖಲಾಗಿದ್ದರೂ ಸಹ ಆ ರೀತಿ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ರಿಂದ 5 ಖೊಟ್ಟಿ ದಾಖಲೆ ಸೃಷ್ಟಿಸಿದ್ದಾರೆ ಎಂದು ವಾದಿ ಯಾವುದೇ ದೂರು ಸಲ್ಲಿಸಿರಲಿಲ್ಲ. ಖರೀದಿ ಪತ್ರ ಆದಾಗಿನಿಂದ 6 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ. 6 ದಾವಾ ಆಸ್ತಿಯಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜವಾಹರ ಯಾವುದೇ ಮೃತ್ಯು ಪತ್ರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೃತ್ಯು ಪತ್ರ ಖೊಟ್ಟಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಿ ಅವರಿಂದ ಆಸ್ತಿ ಹಾಗೂ ಹಣ ಕಬಳಿಸುವ ಉದ್ದೇಶದಿಂದ ವಾದಿಗೆ ಚಿತಾವಣೆ ಮಾಡಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ವಿನಂತಿ ಮೇರೆಗೆ ಪ್ರತಿವಾದಿ ನಂ. 6 ರ ಪರವಾಗಿ ಪಾಟೀ ಸವಾಲಿಗೆ ಮುಂದೂಡಿದೆ)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.